IJRESS Volume 2, Issue 12 (December 2012) ISSN: 2249-7382

# UNIQUE CULTURE ORGANISER

Dr. ChikkannaYennekatte
Dept. of Kannada, GFGC, Sira

## ಅನನ್ಯ ಸಂಸ್ಕೃತಿ ಸಂಘಟಕ

-ಚಿಕ್ಕಣ್ಣಯಣ್ಣೆಕಟ್ಟೆ

ಕಾ.ತ.ಚಿ. ಅವರ ಸಂಘಟನೆ ಹಲವಾರು ಸಾಂಸ್ಕೃತಿಕ, ಸಾಹಿತ್ಯಕ ಮನಸ್ಸುಗಳ ಬೆಸುಗೆಗೆ ಕಾರಣವಾದಂತೆ; ಈ ಸಂಪರ್ಕ ಸಂಗಮ ಹತ್ತಾರು ಪ್ರತಿಭಾವಂತ ಅಧಿಕಾರಿ ಬೇರೆ ಬೇರೆ ಉನ್ನತ ಸ್ಥಾನಮಾನಕ್ಕೂ ಪ್ರೇರಣೆಯಾಗಿದೆ. ಕರ್ನಾಟಕ ಅದರ ಆಚೆಗೂ ಹಲವು ಹತ್ತು ಸಾಂಸ್ಕೃತಿಕ ಮನಸ್ಸುಗಳು ತಮ್ಮ ತಮ್ಮ ಮನಸ್ಸುಗಳ ಬೆಸುಗೆಗೆ ಕಾರಣವಾಗಿದೆ. ಬೆಂಗಳೂರಿನ ಈ ಕಾಂಕ್ರೀಟ್ ಲೋಕದೊಳಗೂ ರೂಪವಾಗಿ ಶ್ರೀಯುತರು ೧೯೮೦ರ ದಶಕದಲ್ಲಿ ವಿಜಯನಗರ ಬಡಾವಣೆಯಲ್ಲಿ ಇವರು ಆರಂಭಿಸಿದ ಕಾಳಿದಾಸ ಸಾಂಸ್ಕೃತಿಕ ಸಂಘ; ಎಷ್ಟು ಅದ್ಭುತವಾದ ಕೆಲಸ ಮಾಡಿದೆ, ಎಷ್ಟು ಬಗೆಯ ಸಾಂಸ್ಕೃತಿಕ, ರಾಜಕೀಯ ಧ್ವನಿ ನೀಡಿದೆ. ಈ ಮಿಲನದ ಕುರುಹಾಗಿ ಅದೆಷ್ಟು ಪ್ರತಿಭಾವಂತರು ಪ್ರಕಾಶಿಸಿದ್ದಾರೆ ಎಂಬುದು ಆ ಸಂಘದ ಸಾಧನೆಯ ಹೆಜ್ಜೆಯ ಗುರುತುಗಳನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಕನಕದಾಸರು ಮತ್ತು ಕನ್ನಡ ಸಾಹಿತ್ಯ. ಕನಕದಾಸರು ಮತ್ತು ಕುರುಬರು. ಕನಕದಾಸರು ಮತ್ತು ಸಾಂಸ್ಕೃತಿಕ ಸಂಘಟನೆ ಈ ಮೂರೂ ಸಂಘಟನಾತ್ಮಕವಾಗಿ ರೂಪಗೊಂಡದ್ದು ಈ ಸಂಘದಿಂದ ಎಂಬುದು ಜನಸಾಮಾನ್ಯರಿಗಿರಲಿ ಈ ಸಮುದಾಯದ ಹಲವು ಯವಕರಿಗೆ ಅರಿವಿಲ್ಲ. ಕನಕದಾಸರು ಬೇರೆ ಬೇರೆ ಸಮುದಾಯಕ್ಕೆ ಸೇರಿದವರು ಎಂಬುದನ್ನು ನಾಯಕ, ತಿಮ್ಮಪ್ಪ, ಮಾಂಡಲೀಕ ಈ ಬಗೆಯ ನಕಾರಾತ್ಮಕ ಚರ್ಚೆ, ಸಂವಾದಗಳು ಪ್ರಾಥಮಿಕ ಹಂತದಲ್ಲಿ ವಾಚಕರ ವಾಣಿ, ಅಭಿಪ್ರಾಯಗಳ ರೂಪದಲ್ಲಿ ಪ್ರಕಟವಾಗಿ, ಕನಕ-ಕುರುಬರ ಸಂಬಂಧವನ್ನೇ ಪ್ರಶ್ನೆ ಮಾಡುತ್ತಿದ್ದ ಕಾಲಕ್ಕೆ ಈ ಸಂಘದ ಮೂಲಕ ಕನಕ ಕಿರಣ, ಮುತ್ತು ಬಂದಿದೆ ಕೇರಿಗೆ, 'Priceless Gold' ಈ ಮೊದಲಾದ ಮಹತ್ವದ ಪುಸ್ತಕಗಳನ್ನು ವಿಶ್ವವಿದ್ಯಾಲಯಮಟ್ಟದ ವಿದ್ವಾಂಸರಿಂದ, ಸಂಶೋಧನಾತ್ಮಕ ಲೇಖನ ಬರೆಸಿ, ಅವುಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುವ, ಕನಕದಾಸರ ವಿಚಾರ ಸಂಕಿರಣ, ಚರ್ಚೆ, ಸಂವಾದ ಸಂಘಟಿಸುವ ಕೆಲಸವನ್ನು ಬೆಂಗಳೂರಿನ ಕಾಳಿದಾಸ ಸಾಂಸ್ಕೃತಿಕ ಸಂಘ ಮಾಡಿತು. ಮೊದಲಿಗೆ ರಾಜ್ಯಮಟ್ಟದ ಕನಕದಾಸರ ಜಯಂತಿಯನ್ನು ಬೆಂಗಳೂರಿನ ಟೌನ್‌ಹಾಲ್, ರವೀಂದ್ರ ಕಲಾಕ್ಷೇತ್ರಗಳಲ್ಲಿ ಸಂಘಟಿಸಿತು. ಕನಕದಾಸರ ಪ್ರಸಿದ್ಧ ಭಾವಚಿತ್ರಗಳನ್ನು ಹಿರಿಯ ಕಲಾವಿದರಿಂದ ರಚಿಸಿ, ಅದನ್ನು ಅಧಿಕೃತವಾಗಿ ಪ್ರಚಾರ ಮಾಡಿತು ಇದರಲ್ಲಿ ರಾಜಕಾರಣಿಗಳು, ಸಮಾಜಸೇವಾ ಮನಸ್ಸಿನ ಹಲವರು ಕೈ ಜೋಡಿಸಿದರು. ಈ ಚಳುವಳಿ ಕನಕ ರೆವೂಲ್ಯೂಷನ್ ಮಾದರಿಯಲ್ಲಿ ಎಲ್ಲೆಡೆ ಹರಡಿತು. ಜಿಲ್ಲೆ, ತಾಲೂಕು ಕೇಂದ್ರಗಳಲ್ಲಿ ಕನಕದಾಸರ ಜಯಂತಿಗಳು ಆರಂಭವಾದವು. ಸರ್ಕಾರದ ಸಂಸ್ಕೃತಿ ಇಲಾಖೆಗಳಿಂದ ಕನಕದಾಸರ ಸಂಶೋಧನೆ, ಕಾವ್ಯಗಳು ಮುದ್ರಣವಾಗಿ, ಜನಪ್ರಿಯಮಾಲೆಯಲ್ಲಿ ಓದುಗರ, ಆಸಕ್ತರ ಕೈಸೇರಲು ಸಾಧ್ಯವಾಯಿತು, ಮಾತ್ರವಲ್ಲ, ಸರ್ಕಾರದ ಮಟ್ಟದಲ್ಲಿ, ರಾಷ್ಟ್ರಮಟ್ಟದ ಕನಕ-ಪುರಂದರ ಪ್ರಶಸ್ತಿ ಪ್ರತಿಷ್ಠಾಪಿಸಲು ಪ್ರೇರಕವಾಯಿತು. ಆ ಮಟ್ಟಿಗೆ ಒಂದು ಸಂಘ ಕ್ರೀಯಾಶೀಲವಾಗಿ ರೂಪುಗೊಂಡು, ಬೆಳೆಯಲು, ಪ್ರಮುಖಧಾತುವಾಗಿ, ಸಂಘಟನಾಚತುರರಾಗಿ ಕಾಣಿಸಿಕೊಂಡ

ಕಾ.ತ.ಚಿ. ಅವರು ಎಲೆಯ ಮರೆಯ ಕಾಯಿಯಾಗಿ, ನಿಂತು ಆ ಸಂಘವನ್ನು ಮುನ್ನಡೆಸಿದರು. ಈ ಸಂಘರ್ಷದಿಂದಾಗಿ ಡಾ.ಎಚ್.ಜೆ. ಲಕ್ಕಪ್ಪಗೌಡ, ಪ್ರೊ.ಸುಧಾಕರ, ಮಲ್ಲಿಕಾಘಂಟಿ, ಎಸ್.ಜಿ. ಸಿದ್ದರಾಮಯ್ಯ, ಕೆ.ಮುಕುಡಪ್ಪ (ಲೋಕಸೇವಾ ಆಯೋಗದ ಮಾಜಿ ಸದಸ್ಯರು) ಈ ಮೊದಲಾದವರು ಜನಾಂಗದ ನಾಯಕರೊಂದಿಗೆ ಗುರುತಿಸಿಕೊಳ್ಳುವ, ಮುಂದೆ ಸ್ಥಾನಮಾನಕ್ಕೆ ಒಂದು ಭದ್ರವಾದ ಬುನಾದಿಯಾದದ್ದು ಕಾ.ತ.ಚಿ. ಕಟ್ಟಿದ, ಸಂಘಟಿಸಿದ, ಕಾಳಿದಾಸ ಸಾಂಸ್ಕೃತಿ ಸಂಘ ಎಂಬುದು ಸ್ಮರಣೀಯ ಸಂಗತಿಯಾಗಿದೆ.

ಇನ್ನು ಕನ್ನಡ ಸಂಸ್ಕೃತಿಯ ಕೆಳಹಂತದ ಅಧಿಕಾರಿ ಸ್ಥಾನದಿಂದ, ಉನ್ನತ ಹುದ್ದೆ; ರಾಜ್ಯ ನಿರ್ದೇಶಕ ಹುದ್ದೆಯವರೆಗೆ ಕೆಲಸ ಮಾಡಿದ್ದಾರೆ. ಇಲಾಖೆಯ ರಾಜ್ಯೋತ್ಸವ ಪ್ರಶಸ್ತಿಗಳು, ವಿವಿಧ ಸಾಹಿತ್ಯ-ಸಾಂಸ್ಕೃತಿಕ ಪ್ರಶಸ್ತಿಗಳ ಆಯ್ಕೆ ಸಮಿತಿ ಸಂಚಾಲಕರಾಗಿ, ಸಂಸ್ಕೃತಿ ಇಲಾಖೆಗೆ ಒಂದು ಹೊಸತನ ತಂದಿದ್ದಾರೆ. ಎಲ್ಲರಿಗೂ ಬೇಕಾದ ಎಲ್ಲರ ವ್ಯಕ್ತಿಯಾಗಿ ಒಳಗೂ-ಹೊರಗು ದುಡಿದಿದ್ದಾರೆ. ಸಾವಿರಾರು ಪುಸ್ತಕಗಳನ್ನು ಇಲಾಖೆಯ ವಿವಿಧ ಯೋಜನೆಯಲ್ಲಿ ಪ್ರಕಟಿಸಿದ್ದಾರೆ. ಇಲ್ಲೆಲ್ಲಾ ಕಾರ್ಯದರ್ಶಿಗಳೊಂದಿಗೆ, ಸರ್ಕಾರದ ಮುಖ್ಯಸ್ಥರೊಂದಿಗೆ ಆತ್ಮೀಯವಾಗಿ ಕೆಲಸ ಮಾಡಿದ್ದಾರೆ. ಇಲಾಖೆ ಎಂದರೆ ಕಾ.ತ.ಚಿ. ಕಾ.ತ.ಚಿ. ಎಂದರೆ ಸಂಸ್ಕೃತಿಕ ಇಲಾಖೆ ಎಂಬ ಮಟ್ಟಿಗೆ ಕಾರ್ಯನಿರ್ವಹಿಸಿದ್ದಾರೆ. ವಿಶ್ವಕನ್ನಡ ಸಮ್ಮೇಳನ, ದಸರಾ, ಹಂಪಿ ಪಟ್ಟದಕಲ್ಲು, ಬನವಾಸಿ ಕದಂಬೋತ್ಸವಗಳ ರೂವಾರಿಯಾಗಿದ್ದಾರೆ. ಕಾ.ತ.ಚಿ. ಅವರ ಸಾಹಿತ್ಯ ಲೋಕ ದೊಡ್ಡದು. ಉತ್ತಮ ಕತೆಗಾರರು ಅದ್ಭತ ಕಾದಂಬರಿಕಾರರು, ನಾಟಕ, ಕಾವ್ಯ, ವಿಚಾರ, ವಿಮರ್ಶಾ ಸಂಪಾದನಾ ಕ್ಷೇತ್ರದಲ್ಲಿ ಗಮನರ್ಹವಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಮೈಸೂರು ಕೆ.ಆರ್.ನಗರ ಸೆರಗಿನ ಗ್ರಾಮೀಣ ಭಾಷೆಯನ್ನು ಹದವಾಗಿ ಬಳಸಿಕೊಂಡು ನಿರೂಪಿಸುತ್ತಾ ಹೋಗುವ ಕಾ.ತ.ಚಿ ಅವರ ಕಥೆಗಳು ರೋಚಕವಾಗಿವೆ. ಹಳ್ಳಿ ಪರಿಸರದಿಂದ ಹೊರಬಿದ್ದು ಐದು ದಶಕಗಳು ಕಳೆದಿದ್ದರೂ, ಆ ಪರಿಸರವನ್ನು ಅಲ್ಲಿನ ಬೋರೀರೆ, ಗುಂಡಿ, ವಿಶೇಷ ವ್ಯಕ್ತಿ, ವೃತ್ತಿಮೂಲಗಳನ್ನು ಯಥಾವತ್ತಾಗಿ ಕಟ್ಟಿಕೊಡುವ ರೀತಿ ಇವರನ್ನು ಅನನ್ಯತೆಗೆ ಕೊಂಡೊಯ್ಯುತ್ತದೆ. ಒಡಲುರಿ, ಹುಚ್ಚೀರಿಯ ಎಸರಿನ ಪ್ರಸಂಗ ಮೊದಲಾದ ಆರು ಸಣ್ಣಕಥಾ ಸಂಪುಟಗಳು; ಮುಂಜಾವು ಎಂಬ ವಿಶಿಷ್ಟ ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವವೂ ಪ್ರಾಪ್ತವಾಗಿದೆ. ಆ ಸಂಖ್ಯೆಯ ಗ್ರಂಥಗಳ ಸಂಪಾದನೆ, ನಿರೂಪಣೆಯ ಕಾರ್ಯವನ್ನು ತುಂಬಾ ಶ್ರದ್ಧೆಯಿಂದ ಮಾಡಿದ್ದಾರೆ. ಹುದ್ದೆ, ಅಚ್ಚುಕಟ್ಟುತನ, ವಾಸ್ತವತೆ ಇವರ ಆಸಕ್ತಿಯ ನೆಲೆಗಳು. ಇಷ್ಟೆಲ್ಲ ಘನತರವಾದ ಕೆಲಸ, ಅಕರ ರೂಪದ ಬದುಕು, ಮೇಲ್ಪಂಕ್ತಿಯ ವ್ಯಕ್ತಿತ್ವ ಸಂಪಾದಿಸಿ, ನೂರಾರು ವ್ಯಕ್ತಿಗಳ ಹಿಂದಿನ ವ್ಯಕ್ತತ್ವವಾಗಿಯೂ ಕಾರ್ಯನಿರ್ವಹಿಸಿರುವ ಕಾ.ತ.ಚಿ. ಅವರನ್ನು ವಿದ್ವತ್‌ಲೋಕ ಸರಿಯಾಗಿ ಗುರುತಿಸಿಲ್ಲ ಅನ್ನುವ ಮಾತನ್ನು ಕೇಳಿದ್ದೇನೆ. ನಾನೇ ಸಮಿತಿಯ ಸದಸ್ಯನಾಗಿ ಇರುವ ಸಮಿತಿಗಳಲ್ಲಿ ಇವರಕತೆ, ಬರಹಗಳನ್ನು ಪಠ್ಯಗಳಲ್ಲಿ ಸೇರಿಸಲೂಇವರಿಂದಉಪಕೃತರಾಗಿ, ಮುಂದೆ ಭಾವುಕರಾಗಿ ಮಾತನಾಡುವವರೂ ಹಿಂದೇಟು ಹಾಕುವ, ಧ್ವನಿ ಇಲ್ಲದವರಾಗಿ ಬಿಡುವ ಅಥವಾ ಜಾಣಮರೆವು ತೋರಿ ಕಾ.ತ.ಚಿ. ಅವರ ಸಾಹತ್ಯ ನಿರ್ಲಕ್ಷಿಸುವ ಸಂದರ್ಭ ಇದೆಯಲ್ಲ. ಸುಸಂಸ್ಕೃತ ಮನುಷ್ಯರ ಅಂತಃಕರಣಹೀನ, ಉಪಕಾರ ಮರೆತ ಮರ್ಮಘಾತುಕತನಕ್ಕೆ ಉತ್ತಮ ಉದಾಹರಣೆ ಎಂದುಕೊಡಿದ್ದೇನೆ. ಹಲವು ಪ್ರಸಂಗಗಳನ್ನು ಈ ಬಗೆಗೆ ಕೇಳಿದ್ದೇನೆ. ಅನುಕೂಲ ಪಡೆದವರೂ ಸಾಂದರ್ಭಿಕವಾಗಿ ಅಪರಿಚಿತರಾಗಿ ನಡೆದುಕೊಳ್ಳುವ ತನಕ್ಕೂ ಕಾ.ತ.ಚಿ. ಒಳಗಾಗಿ

ಸಾಹಿತ್ಯಕವಾಗಿ ಹೆಚ್ಚು ಚರ್ಚೆಗೊಳಗಾಗದೆ ಉಳಿದರು ಅನಿಸುತ್ತದೆ. ಈ ತರಹ ಹಿಕ್‌ಮತ್‌ಗಳ ನಡುವೆಯೂ, ದೂರದರ್ಶನಗಳಲ್ಲಿ ಕತೆ, ಪರಿಸರ ವೃತ್ತಿ, ಅಭಿವೃದ್ಧಿ, ಕೌಶಲ್ಯಕುರಿತ ಹಲವು ಪ್ರಸಂಗಗಳು ಪ್ರಸಾರವಾಗುತ್ತಿವೆ. ವಧೂಟಿ ದೂರದರ್ಶನದಲ್ಲಿ ಇಂದಿಗೂ ಪ್ರಸಾರವಾಗುತ್ತಿದೆ. ರಾಜ್ಯದಾದ್ಯಂತ ನೂರಾರು ಪ್ರದರ್ಶನಕಂಡಿದೆ. ಆಕಾಶವಾಣಿಗಳಲ್ಲಿಯೂ, ಇವರ ಭಾವಗೀತೆ, ಚಿಂತನೆ, ಚರ್ಚೆಗಳು ಪ್ರಸಾರವಾಗುತ್ತಿವೆ.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಬಹು ಮಹತ್ವದ, ಮಹತ್ವಾಕಾಂಕ್ಷಿಯೋಜನೆ ಕರ್ನಾಟಕ ಗ್ರಾಮಚರಿತ್ರೆ ಕೋಶ. ಇದರ ಕನಸುಗಾರ, ಜನಕ ಕಾ.ತ.ಚಿ ಅವರು ಇದರಲ್ಲಿ ಕರ್ನಾಟಕದ ಮೂವತ್ತು ಜಿಲ್ಲೆಗಳ ಪ್ರತಿಯೊಂದು ಗ್ರಾಮ ಅಂದರೆ ಅದು ಕಂದಾಯ, ಮಜರೆ, ಮೂರು ಮನೆಗಳಿಗಿಂತ ಹೆಚ್ಚಿರುವ, ಕಾಲೋನಿ, ರಸ್ತೆ ಬದಿಯ ಮನೆಗಳೂ ಸೇರಿದಂತೆ ಪ್ರತಿಯೊಂದು ಹಳ್ಳಿಗೂ ೨೬೩ ಪ್ರಶ್ನಾವಳಿ ರೂಪಿಸಿ, ಪುಸ್ತಕರೂಪದಲ್ಲಿ ಮಾಹಿತಿಯನ್ನು ತುಂಬುವುದು. ಎರಡನೇ ಹಂತದಲ್ಲಿ ಆ ಮಾಹಿತಿ ಆಧರಿಸಿ ಜಿಲ್ಲಾವಾರು ಸಂಪುಟಗಳನ್ನು ರಚಿಸುವ ಯೋಜನೆಯನ್ನು ರೂಪಿಸಿದೆ. ಈಗಾಗಲೇ ಬಾಗಲಕೋಟೆ, ಬೆಳಗಾವಿ, ಹಾವೇರಿ ಜಿಲ್ಲೆಗಳ ಕರ್ನಾಟಕ ಗ್ರಾಮಚರಿತ್ರೆ ಕೋಶ ಮುದ್ರಣವೂ ಆಗಿದೆ. ತುಮಕೂರು ಜಿಲ್ಲಾ ಗ್ರಾಮ ಚರಿತ್ರೆಕೋಶದ ಜಿಲ್ಲೆಯ ೫೩೩೬ ಹಳ್ಳಿಗಳ ಸಮಗ್ರ ಮಾಹಿತಿ ಆಧರಿತ ಲೇಖನರೂಪದ ಪುಸ್ತಕದ ಮುದ್ರಣಕಾರ್ಯವೂ ಮುಗಿದಿದ್ದು, ಕಾ.ತ.ಚಿ ಈ ಎಲ್ಲಾ ಸಂಪುಟಗಳ ಯೋಜನಾ ಸಂಪಾದಕರಾಗಿ ಕಳೆದ ನಾಲ್ಕು ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಮೂಲಕ ಕರ್ನಾಟಕದ ಪ್ರತಿಯೊಂದು ಗ್ರಾಮಗಳ ಮಾಹಿತಿಯ ಚರಿತ್ರೆ ಲಭ್ಯವಾಗುವ ಹಾಗೆ ಮಾಡಿದ ಹಿರಿಮೆ ಕಾ.ತ.ಚಿ. ಅವರದು,

ಕಾ.ತ.ಚಿ. ಮಾತಿನಾಚೆಯ ಕೃತಿರೂಪ ಇದರಲ್ಲಿ ರಾಜಿ ಮನೋಭಾವವೇ ಇಲ್ಲ. ಕೆಲಸವೂ ಪಕ್ಷಖಚಿತ. ಇಲಾಖೆ ಸಂಸ್ಕೃತಿಯ ಒಳನೋಟ ಇವರನ್ನು ಬಿಟ್ಟರೆ ಬೇರೊಬ್ಬರಿಲ್ಲ ಎನ್ನುವ ಮಾತುಗಳನ್ನು ಬಹಳ ಜನ ವಿದ್ವಾಂಸರು, ಸಂಘ ಸಂಸ್ಥೆಯ ಕಲಾವಿದರು ಮಾತನಾಡಿಕೊಳ್ಳುತ್ತಾರೆ. ಕರ್ನಾಟಕದ ಬಹುತೇಕ ರಾಜಕಾರಣಿಗಳು ಇವರ ಆಪ್ತ ಸಲಹೆಯನ್ನು ಕೇಳುತ್ತಾರೆ. ಯಾವುದೇ ಯೋಜನೆ ಇರಲಿ, ಎಂತಹ ಕಠಿಣ ಅಧಿಕಾರಿ, ಸಚಿವರಿರಲಿ ಅವರನ್ನು ಆ ಯೋಜನೆಯ ಬಗೆಗೆ ಪಕ್ವ ತಿಳುವಳಿಕೆ; ಅನಿವಾರ್ಯತೆಯನ್ನು ಮೂಡಿಸುವ ಅಪರೂಪತನ ಕಾ.ತ.ಚಿ ಅವರಿಗೆ ಕಾ.ತ.ಚಿ ಅವರೇ ಸಾಟಿ.

ಹೀಗೆ ಬಹುಮುಖ ವ್ಯಕ್ತಿತ್ವದ, ಸಂಘಟಕ ಸಾಹಿತಿ, ಕಾ.ತ.ಚಿಕ್ಕಣ್ಣ ಸ್ವಾಭಿಮಾನಿ, ಸಜ್ಜನಿಕೆ, ಸ್ವಚ್ಛತೆಯ ಪ್ರತೀಕ. ಆಡಳಿತದಲ್ಲಿ ಎಂದೂ ತೂಕ ತಪ್ಪಿದವರಲ್ಲ. ಪಾರದರ್ಶಕತೆ ಇವರ ಮತ್ತೊಂದು ಮುಖದಕ್ಷತೆಗಾಗಿ ಹಲವು ಪುರಸ್ಕಾರ ಗೌರವಗಳ ಪಡೆದು ಕ್ಲಾಸ್‌ಒನ್ ಸ್ಟೇಟ್‌ಆಫೀಸರ್‌ರಾಗಿ ನಿವೃತ್ತರಾದರೂ ಬೆಂಗಳೂರಿನಲ್ಲಿ ಒಂದು ಸ್ವಂತ ಮನೆ ಬೇಡ, ಒಂದುಕಿರು ಸೈಟನ್ನೂ ಮಾಡಿಕೊಳ್ಳದೇ ಹೋದ ಶ್ರದ್ಧಾವಂತ ರಾಜಸೇವಕ ಅಧಿಕಾರಿ. ಇದು ಅವರ ಒಡನಾಡಿಗಳಿಗೂ ಪಾಠವಾಗಬೇಕಷ್ಟೆ.